ಓ.ಎಸ್. ನಂ. 75/2015

ಪಿ.ಡಬ್ಲ್ಯು: 01 (ಓಬಯ್ಯ)

ದಿನಾಂಕ: 23.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ನನ್ನ ಅಣ್ಣ ಹನುಮಯ್ಯನಿಗೆ ಒಬ್ಬನೇ ಮಗ. ಆತನಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. ನನ್ನ ತಾತನ ಒಡಹುಟ್ಟಿದವರು 3 ಜನ ಇದ್ದು, ಅವರು ಲಿಂಗಯ್ಯ, ಮಳೇಲ ಓಬಯ್ಯ, ಕಜ್ಜಿ ಪಾಲಯ್ಯ. ಅವರುಗಳು ವಿಭಾಗ ಆಗಿ ಎಷ್ಟು ವರ್ಷ ಆಗಿದೆ ಎಂದು 50-60 ವರ್ಷ ಆಗಿದೆ.

ಲಿಂಗಯ್ಯನ ಮಕ್ಕಳು, ಕಜ್ಜಿ ಪಾಲಯ್ಯನ ಮಕ್ಕಳು ಅವರವರ ಕುಟುಂಬದಲ್ಲಿ ಆಸ್ತಿಗಳ ವಿಭಾಗ ಮಾಡಿಕೊಂಡು ಎಷ್ಟು ವರ್ಷಗಳಾಗಿದೆ ಎಂದರೆ ಅವರು ವಿಭಾಗವೇ ಆಗಿಲ್ಲ. ನಾನು ನನ್ನ ಒಡಹುಟ್ಟಿದವರೊಂದಿಗೆ ಆಸ್ತಿಗಳ ವಿಭಾಗವನ್ನು ಮಾಡಿಕೊಂಡಿರುವುದಿಲ್ಲ.

4 ನೇ ಪ್ರತಿವಾದಿಗೆ 78 ವರ್ಷ ಎಂದರೆ ಅವರಿಗೆ ನಮಗೆ ಸಂಬಂಧ ಇಲ್ಲ, ಅವರ ವಯಸ್ಸು ನನಗೆ ಗೊತ್ತಿಲ್ಲ. 4 ಮತ್ತು 5 ನೇ ಪ್ರತಿವಾದಿಗಳು ಅಕ್ಕತಂಗಿ ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರ ತಂದೆಯ ಹೆಸರು ಉಜ್ಜಪ್ಪ ಎಂದರೆ ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿಯ ಅಣ್ಣನ ಹೆಸರು ಬಸಯ್ಯ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 9-10 ರವರನ್ನು ಯಾವ ಕಾರಣಕ್ಕೆ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಐಟಂ ನಂಬರ್ 1 ಸರ್ವೆ ನಂಬರ್ 30 ವಿಸ್ತೀರ್ಣ 14.85 ಎಕರೆ ಇದೆ. ಅದು ನನ್ನ ತಂದೆಯ ಆಸ್ತಿ ಎಂದರೆ ಅಲ್ಲ, ನನ್ನ ತಾತ ಮಳೇಲ ಓಬಯ್ಯನ ಸ್ವಂತ ಆಸ್ತಿ. ಸದರಿ ಸ್ವತ್ತಿನ ಪಹಣಿ ಯಾರ ಹೆಸರಿಗೆ ಇದೆ ಎಂದರೆ ನನ್ನ ತಾತ ಹಾಗೂ ಅವರ ಒಡಹುಟ್ಟಿದವರ ಹೆಸರಿನಲ್ಲಿ 14.85 ಎಕರೆ ಇದೆ. ನಾನು ದಾವೆ ಸಲ್ಲಿಸುವಾಗ ಪಹಣಿಯನ್ನು ನೋಡಿ ಸಲ್ಲಿಸಿರುತ್ತೇನೆ.

ಪ್ರತಿವಾದಿ 9-11 ರವರ ಹೆಸರು ಪಹಣಿಯಲ್ಲಿರುವುದನ್ನು ನಾನು ನೋಡಿದ್ದೇನೆಯೇ ಎಂದರೆ ನನಗೆ ವಿದ್ಯಾಭ್ಯಾಸ ಬರುವುದಿಲ್ಲ. ಪ್ರತಿವಾದಿ 9-11 ರವರನ್ನು ಯಾವ ಕಾರಣಕ್ಕೆ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಪಹಣಿ ನನ್ನ ತಾತನ ಒಡಹುಟ್ಟಿದವರ ಹೆಸರಿನಲ್ಲಿದ್ದ ಕಾರಣ ದಾವೆಯನ್ನು ಸಲ್ಲಿಸಿರುತ್ತೇನೆ.

1970-71 ರಿಂದ ಐಟಂ ನಂಬರ್ 1 ರಲ್ಲಿ 12 ಎಕರೆಗೆ ಉಜ್ಜಯ್ಯ ಮತ್ತು ಬಸಪ್ಪನವರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪಹಣಿ ಪರಿಶೀಲನೆ ಮಾಡಿದ್ದೇನೆಯೇ ಎಂದರೆ ಅವರ ಹೆಸರುಗಳು ಇಲ್ಲ. ಐಟಂ ನಂಬರ್ 1 ಕ್ಕೆ ಸಂಬಂಧಪಟ್ಟಂತೆ 1970 ರಿಂದ ಹಳೆ ಪಹಣಿಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. ಆಗ ನನಗೆ ಉಜ್ಜಪ್ಪ ಮತ್ತು ಬಸಯ್ಯ (ಪ್ರತಿವಾದಿ 9 ರವರೊಂದಿಗೆ ಜಂಟಿ ಖರೀದಿದಾರರು) ರವರ ಹೆಸರು ಬಂದಿದ್ದು ನನಗೆ ಗೊತ್ತಾಯಿತು ಎಂದರೆ ನನಗೆ ಗೊತ್ತಾಗಿಲ್ಲ.

ನಾನು ಪ್ರತಿವಾದಿ 1 ರಿಂದ 8 ರವರು ಸೇರಿ ವಕೀಲರಿಗೆ ಮಾಹಿತಿಯನ್ನು ನೀಡಿ, ದಾವೆ ಹೂಡಿರುತ್ತೇವೆ. ನಾವು ಮತ್ತು ಅವರ ಚೆನ್ನಾಗಿದ್ದೇವೆ ಎಂದರೆ ಚೆನ್ನಾಗಿದ್ದೇವೆ. ಸದರಿಯವರಿಗೆ ಪ್ರತಿವಾದಿ 9-11 ರವರ ಹೆಸರು ಪಹಣಿ ಪತ್ರಿಕೆಯಲ್ಲಿರುವುದು ಗೊತ್ತಿದೆಯೇ ಎಂದರೆ ಗೊತ್ತಿದ್ದರು ಗೊತ್ತಿರಬಹುದು.

ಐಟಂ ನಂಬರ್ 2 ಮತ್ತು 3 ನ್ನು ನಾವು ಭಾಗ ಆಗಿಲ್ಲ. ನಮಗೆ ಸೇರಿದ ಎಷ್ಟು ಮನೆಗಳಿವೆ ಎಂದರೆ 6-7 ಗುಡಿಸಲುಗಳು ಇವೆ. ಪ್ರತಿವಾದಿ 9-11 ರವರು ಐಟಂ ನಂಬರ್ 1 ರಲ್ಲಿ ಎಷ್ಟು ಎಕರೆ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 9-11 ರವರು ಐಟಂ ನಂಬರ್ 1 ರಲ್ಲಿ 12 ಎಕರೆಯನ್ನು 1971 ರಿಂದ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಮಾಡುತ್ತಿರಬಹುದು ನನಗೆ ಗೊತ್ತಿಲ್ಲ. ಉಳಿದ 2.85 ಎಕರೆ ನಮ್ಮ ಸ್ವಾಧೀನದಲ್ಲಿದೆ ಎಂದರೆ ಇರಬಹುದು.

ನಮ್ಮ ತಂದೆ ನಮ್ಮ ಕುಟುಂಬದ ಯಜಮಾನಿಕೆ ಮಾಡುತ್ತಿದ್ದ ಎಂದರೆ ಹೌದು. ಆತನ ಜೀವಂತ ಕಾಲದಲ್ಲಿ ಐಟಂ ನಂಬರ್ 1 ರ ಪೈಕಿ 12 ಎಕರೆಯನ್ನು ಬಸಯ್ಯ ಮತ್ತು ಉಜ್ಜಪ್ಪರವರಿಗೆ ದಿಃ 13.05.1971 ನೊಂದಾಯಿತ ಕ್ರಯ ಪತ್ರದ ಮೂಲಕ ಕುಟುಂಬದ ಖರ್ಚಿಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿರುವುದಿಲ್ಲ ಎಂದು ನಾನು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದರೆ ಮಾರಾಟ ಮಾಡಿದ್ದರೆ ನನ್ನ ತಂದೆ ನನಗೆ ಹೇಳುತ್ತಿದ್ದರು, ಈ ಬಗ್ಗೆ ನಾನು ಋಣಭಾಗ ಪ್ರಮಾಣ ಪತ್ರ ತೆಗೆಸಿರುವುದಿಲ್ಲ. ದಾವಾ ದಾಖಲು ಮಾಡುವಾಗ ಪ್ರತಿವಾದಿ 9 ರವರ ಅಣ್ಣ ಬಸಯ್ಯ ಮತ್ತು ಪ್ರತಿವಾದಿ 10 ಮತ್ತು 11 ರವರ ಹೆಸರು ಪರಿಶೀಲನೆ ಮಾಡಿರುತ್ತೇನೆ ಎಂದರೆ ಇಲ್ಲ. ದಾವೆ ದಾಖಲು ಮಾಡುವಾಗ ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡದೇ ಸಲ್ಲಿಸಿರುತ್ತೇನೆ ಎಂದರೆ ಹೌದು. ಪ್ರತಿವಾದಿ 9-11 ರವರು ಏನೆಂದು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದು ಗೊತ್ತಿದೆ.

ಅದರಲ್ಲಿ ಅವರ ತಂದೆ 12 ಎಕರೆ ಖರೀದಿ ಮಾಡಿರುವ ಬಗ್ಗೆ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರದ ಬಗ್ಗೆ ಇಂದಿನವರೆಗೆ ನಾನು ಯಾವುದೇ ಪರಿಶೀಲನೆ ಮಾಡಿರುವುದಿಲ್ಲ. 1971 ರಲ್ಲಿ ನಾನು ಮತ್ತು ನನ್ನ ಅಣ್ಣ ಹುಟ್ಟಿರಲಿಲ್ಲ ಎಂದರೆ ಹೌದು. ನನ್ನ ತಂದೆಯ ಜೀವಂತ ಕಾಲದಲ್ಲಿ ಉಜ್ಜಪ್ಪ ಮತ್ತು ಬಸಯ್ಯನವರಿಗೆ

ಮಾರಾಟ ಮಾಡಿದ ಬಗ್ಗೆ ನನಗೂ ನನ್ನ ಕುಟುಂಬದವರಿಗೆ ಗೊತ್ತಿತ್ತು ಎಂದರೆ ಯಾರಿಗೂ ಗೊತ್ತಿಲ್ಲ. ಅವರುಗಳ ಹೆಸರಿಗೆ ಪಹಣಿ ಆಗಿರುವ ಬಗ್ಗೆ ಗೊತ್ತಿತ್ತು ಎಂದರೆ ಗೊತ್ತಿಲ್ಲ. ಅವರ ಸ್ವಾಧೀನದ ಬಗ್ಗೆ ಸಹ ನಮಗೆ ಗೊತ್ತಿತ್ತು ಎಂದರೆ ಇಲ್ಲ. ಅವರು ಯಾವ ಕಾರಣಕ್ಕೆ 12 ಎಕರೆಯ ಸ್ವಾಧೀನದಲ್ಲಿದ್ದಾರೆ ಎಂಬ ಬಗ್ಗೆ ಪರಿಶೀಲನೆ ಮಾಡಿರುತ್ತೇನೆಯೇ ಎಂದರೆ ಇಲ್ಲ. ಸರ್ವೆ ನಂಬರ್ 30 ರಲ್ಲಿ 2.85 ಎಕರೆ 12 ಎಕರೆಯ ಉತ್ತರಕ್ಕೆ ಬರುತ್ತದೆ.

ಪ್ರತಿವಾದಿ 9-11 ರವರ ಹೆಸರಿನಲ್ಲಿರುವ ಪಹಣಿ ಪತ್ರಿಕೆಯನ್ನು ನಾವು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ.

ಐಟಂ ನಂಬರ್ 1 ರ ಪಹಣಿಯಲ್ಲಿ ಬೂರಮ್ಮ ಎಂಬ ಹೆಸರು ಇದೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಪಾಪಯ್ಯನ ಅಣ್ಣನ ಹೆಸರು ಬಸಯ್ಯ ಎಂದರೆ ನನಗೆ ಗೊತ್ತಿಲ್ಲ. ಬಸಯ್ಯನ ಹೆಂಡತಿ ಬೋರಮ್ಮ ಎಂದರೆ ನನಗೆ ಗೊತ್ತಿಲ್ಲ. 1971 ರಲ್ಲಿ ನನ್ನ ತಂದೆ 12 ಎಕರೆ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿದ್ದರು ಸಹ ಅದನ್ನು ಮುಚ್ಚಿಟ್ಟು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆ 15-16 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ಸದರಿ ಕ್ರಯ ಪತ್ರವನ್ನು ಪ್ರಶ್ನಿಸಿರುವುದಿಲ್ಲ.

ನನ್ನ ತಂದೆ 12 ಎಕರೆ ಮಾರಾಟ ಮಾಡಿರುವ ಬಗ್ಗೆ ನಮಗೂ ಹಾಗೂ 1 ರಿಂದ 8 ನೇ ಪ್ರತಿವಾದಿಗಳಿಗೆ ಗೊತ್ತಿದ್ದರು ಸಹ ಅದನ್ನು ಮುಚ್ಚಿಟ್ಟು ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮಗಾಗಲೀ, 1 ರಿಂದ 8 ನೇ ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.